


ನಿರೂಪಿಸುತ್ತಿದ್ದರು. ನಿರೂಪಣೆಯೂ ಒಂದು ಹೊಸ ಕಥೆಯಾಗುವ, ಬೇರೆ ವಸ್ತುವಿಗೆ ಮತ್ತೆ ಅವಕಾಶ ಕೊಡಬಹುದಾದಷ್ಟು ಮಧುರವಾದ, ಅರ್ಥದೂರವಾದ ಚರ್ಚೆ ಆಗಿರುತ್ತಿತ್ತು.

ಶಾಂತಿನಾಥ ದೇಸಾಯರಿಗೆ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಆಪ್ತರಾಗಿದ್ದರು. ಇಬ್ಬರಿಗೂ ಉತ್ತರ ಕನ್ನಡ ಜಿಲ್ಲೆಯ ಹಿನ್ನೆಲೆಯ ನಂಟು. ದೇಸಾಯರು ಹೊಸದಾಗಿ ಆರಂಭಗೊಂಡ ಕುವೆಂಪು ವಿಶ್ವವಿದ್ಯಾಲಯದ ವೈಸ್‌ಚಾನ್ಸಲರ್ ಆದರು. ಕೊಲ್ಹಾಪುರದಲ್ಲಿ ಇದ್ದಾಗ ಬಹಳ ಸಲ ಶಿವಾಜಿ ವಿವಿಯ ಪ್ರಭಾರ ವೈಸ್‌ಚಾನ್ಸಲರ್ ಆಗಿ ದುಡಿದದ್ದು ಈಗ ನೆರವಿಗೆ ಬಂದಿತ್ತು. ಅವರು ಮತ್ತೆ ಕರ್ನಾಟಕಕ್ಕೆ ಬಂದರೆಂದು ಹರ್ಷಪಟ್ಟೆ. ಶಿವಮೊಗ್ಗೆಯಲ್ಲಿ ಮನೆ. ಮನೆಯಲ್ಲಿ ಕುಳಿತೇ ಮುಕ್ಕಾಲುಪಾಲು ಕಚೇರಿ ಕೆಲಸ. ಅನಂತರ ದೂರದ ವಿವಿ ಆವರಣಕ್ಕೆ ಹೋಗುವುದು–ಬರುವುದು. ಆಗ ಅನಿವಾರ್ಯವಾಗಿ ನಮ್ಮ ಸಂಪರ್ಕ ಸ್ವಲ್ಪ ವಿರಳವಾಯಿತು. ಆದರೂ 2–3 ಸಲ ಅವರ ಅಪೇಕ್ಷೆಯ ಮೇರೆಗೆ ಹೋಗಿಬಂದೆ. ಯಾಕೋ ನಮಗಿಬ್ಬರಿಗೂ ಸಮಾಧಾನವಾಗಲಿಲ್ಲ. ಆಡಳಿತದಲ್ಲಿ ದೇಸಾಯರ ಸ್ವಂತದ ದನಿ ಕ್ಷೀಣವಾಗತೊಡಗಿತ್ತು, ಅದು ಬಹುತೇಕ ಎಲ್ಲರಿಗೂ ಅರ್ಥವಾಗುತ್ತಿತ್ತು. ಅವರು ಅಸಹಾಯಕರಾಗಿದ್ದರು. ಹೊಸ ವಿಶ್ವವಿದ್ಯಾಲಯವನ್ನು ಕಟ್ಟುವ ನಿಟ್ಟಿನಲ್ಲಿ ಅನಿವಾರ್ಯವಾಗಿ, ಮತ್ತೆಮತ್ತೆ ರಾಜಧಾನಿಗೆ, ಆಡಳಿತ ಸೌಧಕ್ಕೆ ಹೋಗಬೇಕಾಗಿ ಬರುತ್ತಿತ್ತು; ಅದರಿಂದಾಗಿ ಶಾಂತಿನಾಥರ ಸೃಜನಶೀಲ ಬರವಣಿಗೆಯೂ ಕಡಿಮೆಯಾಗತೊಡಗಿತ್ತು. ನಮ್ಮ ಮೈತ್ರಿನಿಷ್ಠೆಗೆ ಮಾತ್ರ ಎಂದೂ ಕೊರತೆ ಬರಲಿಲ್ಲ. ಅಂಥ ದಿನಗಳಲ್ಲಿಯೇ ಒಂದು ಸಲ ಸುಮಿತ್ರಾರೊಂದಿಗೆ ಧಾರವಾಡದ ನಮ್ಮ ಮನೆಗೆ ಬಂದು ಬಹಳ ಹೊತ್ತು ಕಳೆದರು; ನಮ್ಮ ಮಗಳು